## “ಜಿಲ್ಲಾ ಮಾನಸಿಕ ಆರೋಗ್ಯ ಅರಿವು ಕಾರ್ಯಕ್ರಮದಲ್ಲಿ” ಹೆಚ್ಚಾಗಿ ಕೇಳಲಾದ ಪ್ರಶ್ನೆಗಳು”

**ಮಾನಸಿಕ ರೋಗಿ ಬೇಕೆಂದೇ ವಿಚಿತ್ರವಾಗಿ ತಪ್ಪು ತಪ್ಪಾಗಿ ನಡೆದುಕೊಳ್ಳುತ್ತಾನೆ.ಹೌದೇ?**
ಇದೊಂದು ತಪ್ಪು ಅಭಿಪ್ರಾಯ, ಮೆದುಳಿನಲ್ಲಿ ಆಗುವ ರಾಸಾಯನಿಕ ಕ್ರಿಯೆಗಳಿಂದ ಮಾನಸಿಕ ಕಾಯಿಲೆಗಳ ಲಕ್ಷಣಗಳು ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ ಭ್ರಮೆ, ಬ್ರಾಂತಿ. ಅಂದರೆ ಯಾವುದೇ ಕಾರಣಗಳು ಇಲ್ಲದೆ ಯೋಚನೆಗಳು ಬರುವುದು, ಬೇರೆಯವರಿಗೆ ಕೇಳಿಸದ ಧ್ವನಿ ಅಥವಾ ಇತರರಿಗೆ ಕಾಣಿಸಿದ ದೃಶ್ಯಗಳು ಕಾಣಿಸುವುದು. ಇದರಲ್ಲಿ ಬೇಕೆಂದೇ ವಿಚಿತ್ರವಾಗಿ ನಡೆದುಕೊಳ್ಳುವುದು ಬಹಳ ಕಡಿಮೆ.

**ಮಾನಸಿಕ ಕಾಯಿಲೆಗೆ ಮದ್ದಿಲ್ಲ. ಇದು ನಿಜವೇ?**
ಈ ಗಾದೆ ಮಾತು ಹಿಂದಿನ ಅನುಭವದಿಂದ ಬಂದಿದೆ. ಆದರೆ ಈಗಿನ ವಿಜ್ಞಾನದ ಪ್ರಕಾರ ಮಾನಸಿಕ ಕಾಯಿಲೆಗೆ ಪರಿಣಾಮಕಾರಿ ಮತ್ತು ಸುರಕ್ಷಿತವಾದ ಚಿಕಿತ್ಸೆಗಳು ಲಭ್ಯವಿದೆ.

**ಮಾನಸಿಕ ಕಾಯಿಲೆಗಳು ವಂಶಪಾರಂಪರ್ಯವಾಗಿ ಬರುತ್ತದೆಯೆ ?**
ಕೆಲವು ಕಾಯಿಲೆಗಳು ಅನುವಂಶಿಕವಾಗಿ ಬರುವುದೆಂದು ಸಮೀಕ್ಷೆಗಳಿಂದ ಕಂಡು ಬಂದಿದೆ. ಈ ಅನುವಂಶಿಕತೆಯು ಕಡಿಮೆ ಪ್ರಮಾಣದ್ದಾಗಿರುತ್ತದೆ.

**ಒಮ್ಮೆ ಮಾನಸಿಕ ರೋಗಿಯಾದ ವ್ಯಕ್ತಿ ಯಾವ ಕೆಲಸವನ್ನು ಮಾಡಲು ಸಾಧ್ಯವಿಲ್ಲವೇ?**
ಮಾನಸಿಕ ರೋಗಿಗಳು ಚಿಕಿತ್ಸೆಯಿಂದ ಚೇತರಿಕೆಯಾದ ನಂತರ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ವೃತ್ತಿ ಮತ್ತು ಕೌಶಲ್ಯ ತರಬೇತಿ ಪಡೆದು ಕೆಲಸವನ್ನು ಮಾಡಬಹುದು.

**ಮಾನಸಿಕ ರೋಗಿಯನ್ನು ಶಾಶ್ವತವಾಗಿ ಮಾನಸಿಕ ಚಿಕಿತ್ಸಾ ಆಸ್ಪತ್ರೆಯಲ್ಲಿ ದಾಖಲು ಮಾಡಬೇಕೇ ?**
ಮಾನಸಿಕ ರೋಗಿಗಳಿಗೆ ಹೊರ ರೋಗಿ ಹಾಗೂ ಒಳ ರೋಗಿಯಾಗಿ ಚಿಕಿತ್ಸೆ ಪಡೆಯುವ ಸೌಲಭ್ಯವಿದೆ. ಮಾನಸಿಕ ರೋಗಿಯನ್ನು ಶಾಶ್ವತವಾಗಿ ಆಸ್ಪತ್ರೆಗಳಲ್ಲಿ ದಾಖಲು ಮಾಡಬೇಕಾಗಿಲ್ಲ.

**ದೆವ್ವ ಭೂತಗಳಿಂದ, ಮಾನಸಿಕ ಕಾಯಿಲೆಗಳು ಬರುತ್ತದೆಯೆ ?**
ದೆವ್ವ ಭೂತಗಳ ಇರುವಿಕೆಯ ಬಗ್ಗೆ ಯವುದೇ ವೈಜ್ಞಾನಿಕ ಪುರಾವೆಗಳಿಲ್ಲ. ಮಿದುಳಿನಲ್ಲಿ ಆಗುವ ಕೆಲವು ಬದಲಾವಣೆಗಳು, ಮಿದುಳಿನ ಕಾಯಿಲೆಗಳು, ವಾತಾವರಣದಲ್ಲಿ ಕಂಡುಬರುವ ತೊಂದರೆಗಳು, ಮೇಲಿಂದ ಮೇಲೆ ಮನಸ್ಸಿಗೆ ಆಗುವ ನೋವು-ನಿರಾಶೆಗಳು, ಮಧ್ಯಪಾನ ಮತ್ತು ಮಾದಕ ವಸ್ತುಗಳ ಸೇವನೆಯಿಂದ ಮಾನಸಿಕ ಕಾಯಿಲೆಗಳು ಬರುತ್ತವೆ.